OS. No. 353/2023
DW.2

ಇಂದು ದಿನಾಂಕ: 09-07-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಪ್ರತಿವಾದಿ ಪರ ವಕೀಲರಿಂದ :-

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನನ್ನ ಶಪಥ ಪತ್ರದ ಮೇಲೆ ನಾನು ಸಹಿ ಮಾಡಿರುತ್ತೇನೆ.

ಪಾಟಿ ಸವಾಲುಃ ವಾದಿ ಪರ ವಿ.ಹೆಚ್. ವಕೀಲರಿಂದ:

ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿ ನನಗೆ ಗೊತ್ತಿಲ್ಲ. ನಮ್ಮ ಪ್ರತಿವಾದ ಪತ್ರದಲ್ಲಿ ಏನು ಬರೆಯಲಾಗಿದೆ ಎಂಬುದು ಗೊತ್ತಿಲ್ಲ ಎಂದರೆ ಸರಿ

ತಿಪ್ಪಮ್ಮ ಮತ್ತು ಶಾಂತಮ್ಮ ಅಕ್ಕತಂಗಿಯರು ಎಂದರೆ ಸರಿ. ಸದರಿ ತಿಪ್ಪಮ್ಮ ಮತ್ತು ಶಾಂತಮ್ಮ ರವರು ತಿಮ್ಮಣ್ಣ ಮತ್ತು ಹುಸೇನಮ್ಮಳ ಮಕ್ಕಳು ಎಂದರೆ ಸರಿ. ತಿಮ್ಮಣ್ಣ ಮತ್ತು ಹುಸೇನಮ್ಮಳಿಗೆ ಗಂಡು ಸಂತಾನ ಇರಲಿಲ್ಲ, ತಿಪ್ಪಣ್ಣ ಮತ್ತು ಶಾಂತಮ್ಮ ಮಾತ್ರ ಅವರು ಮಕ್ಕಳು ಎಂದರೆ ಸರಿ ತಿಮ್ಮಣ್ಣನ ಹೆಸರಿನಲ್ಲಿ ಎಷ್ಟು ಹೊಲಗಳು ಇದ್ದವು ಎಂಬುದು ಗೊತ್ತಿಲ್ಲ. ನನ್ನ ಹೆಸರಿನಲ್ಲಿ ಸರ್ವೆ ನಂ.156 ರಲ್ಲಿ 1 ಎಕರೆ 40 ಗುಂಟೆ ಜಮೀನು ಇರುತ್ತದೆ. ಸದರಿ 1 ಎಕರೆ 40 ಗುಂಟೆ ಜಮೀನು ಮೊದಲು ನಮ್ಮ ತಾಯಿಯ ಹೆಸರಿನಲ್ಲಿತ್ತು. 156 ನೇ ಸರ್ವೆ ನಂಬರಿನಲ್ಲಿ ಒಟ್ಟು ಎಷ್ಟು ಜಮೀನು ಇತ್ತು ಎಂಬುದು ಗೊತ್ತಿಲ್ಲ. ನಾನು ಮತ್ತು ನನ್ನ ಅಣ್ಣ ವಿಭಾಗ ಮಾಡಿಕೊಂಡಿದ್ದೇವೆ ನಮ್ಮ ಅಕ್ಕತಂಗಿಯರಿಗೆ ಪಾಲು ಕೊಟ್ಟಿಲ್ಲ ಎಂದರೆ ಸರಿ. ನನ್ನ ಮತ್ತು ನನ್ನ

ಅಣ್ಣನ ಮಧ್ಯೆ ವಿಭಾಗ ಆಗಿ 5 ವರ್ಷಗಳಾಗಿವೆ. ದಾವಾ ಐಟಂ ನಂ.2, ಸರ್ವೆ ನಂ.141/*/6 ನಮ್ಮ ತಾಯಿಯ ಹೆಸರಿನಲ್ಲಿದೆ. ಐಟಂ ನಂ.2 ನಮ್ಮ ತಾಯಿಯ ಹೆಸರಿಗಿಂತ ಮೊದಲು ಯಾರ ಹೆಸರಿನಲ್ಲಿತ್ತು ಎಂಬುದು ಗೊತ್ತಿಲ್ಲ. ಐಟಂ ನಂ. 2 ನಿಮ್ಮ ತಾಯಿಗೆ ಹೇಗೆ ಬಂತು ಎಂದರೆ ಸಾಕ್ಷಿದಾರರು ಅದು ನಮ್ಮ ತಾಯಿಗೆ ತಂದೆಯಿಂದ ಬಂದ ಆಸ್ತಿ ಎನ್ನುತ್ತಾರೆ. ಐಟಂ ನಂ.1 ರಲ್ಲಿ 2 ಎಕರೆ ಜಮೀನು ಒಬ್ಬ ಜಡೆ ಹನುಮಂತ ಎಂಬ ವ್ಯಕ್ತಿಗೆ ಮಾರಾಟ ಮಾಡಿದ್ದೇವೆ ಮತ್ತು ಈಗ ಆ ಆಸ್ತಿ 7 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ವಾದಿಗೆ ಪಾಲು ಕೊಡದೆ ಜಡೆ ಹನುಮಂತನಿಗೆ ಜಮೀನು ಮಾರಿದ್ದು ಕಾನೂನು ಬಾಹಿರ ಎಂದರೆ ಸರಿಯಲ್ಲ. ನನ್ನ ಮಾವ ಮಲ್ಲಣ್ಣ ಯಾವಾಗ ತೀರಿಕೊಂಡಿದ್ದ ಎಂಬುದು ಗೊತ್ತಿಲ್ಲ. ತಿಮ್ಮಣ್ಣ ಮತ್ತು ಹುಸೇನಮ್ಮ ತೀರಿಕೊಂಡ ಮೇಲೆ ನಮ್ಮ ತಾಯಿ ಮತ್ತು ವಾದಿ ದಾವಾ ಆಸ್ತಿಗಳಲ್ಲಿ ಜಂಟಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ನಮ್ಮ ತಂದೆ ಊರು ಕಪಗಲ್. ನಮ್ಮ ತಾಯಿ ಕಪಗಲ್ ನಿಂದ ಮತ್ತು ವಾದಿ ಕವಿತಾಳದಿಂದ ದಾವಾ ಆಸ್ತಿ ಇರುವ ನಕ್ಕುಂದಿಗೆ ಹೋಗಿ ಜಂಟಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಗಳಲ್ಲಿ ಪಾಲು ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಯಾವ ದಾಖಲೆಗಳನ್ನು ಸಲ್ಲಿಸಿದ್ದೇವೆ ಎಂದು ನಮ್ಮ ಅಣ್ಣನಿಗೆ ಗೊತ್ತಿದೆ. ದಾವಾ ಆಸ್ತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೆ ಇದ್ದರು ನನ್ನ ಅಣ್ಣನ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ

ದಾವಾ ಆಸ್ತಿಗಳಲ್ಲಿ ಪಾಲು ಕೊಡದೆ ಕಾನೂನು ಬಾಹಿರವಾಗಿ ನಾವು ಮುಟೇಷನ್ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಇಲ್ಲಿಯವರೆಗೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ,

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾನವಿ.